# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 815(895) |
| ಉತ್ತರಿಸುವ ದಿನಾಂಕ | 10-03-2021 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ಆದಾಯದ ಮೂಲಗಳಲ್ಲಿ ಒಂದಾಗಿರುವ ಉಪ ನೋಂದಣಾಧಿಕಾರಿ ಕಛೇರಿಗಳು ಬ್ರೋಕರ್‌ಗಳ ಅಡ್ಡೆಯಾಗಿರುವ ಕುರಿತು ಸರ್ಕಾರದ ನಿಲುವೇನು; ಈ ಕಛೇರಿಗಳಲ್ಲಿ ಲಂಚದ ಎಲ್ಲಾ ವ್ಯವಹಾರಗಳನ್ನು ಇವರೇ ನೋಡಿಕೊಳ್ಳುತ್ತಿದ್ದು, ಈ ಬ್ರೋಕರ್‌ಗಳ ಹಾವಳಿ ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಸಾರ್ವಜನಿಕರು ಯಾವುದೇ ದಸ್ತಾವೇಜು ನೋಂದಣಿಗೆ ಸಂಬಂಧಿಸಿದಂತೆ ಯಾವುದೇ ಮಧ್ಯವರ್ತಿ/ದಳ್ಳಾಳಿಗಳನ್ನು ಸಂಪರ್ಕಿಸದೆ ಸಂಬಂಧಪಟ್ಟ ಉಪನೋಂದಣಿ ಕಛೇರಿಗಳಲ್ಲಿ ನೇರವಾಗಿ ಉಪನೋಂದಣಾಧಿಕಾರಿ / ಸಿಬ್ಬಂದಿಗಳ ಮಾರ್ಗದರ್ಶನ ಪಡೆದು, ದಸ್ತಾವೇಜನ್ನು ಸಿದ್ಧಪಡಿಸಿಕೊಂಡು ನೋಂದಾಯಿಸಿಕೊಳ್ಳಬಹುದು.<br>ಸದರಿ ಮಧ್ಯವರ್ತಿಗಳು ಉಪನೋಂದಣಿ ಕಛೇರಿಯ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದನ್ನು ನಿರ್ಬಂಧಿಸಿ, ಕಾಲ ಕಾಲಕ್ಕೆ ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಮಧ್ಯವರ್ತಿಗಳ ಹಾವಳಿ ಬಗ್ಗೆ ದೂರು ಬಂದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಸುತ್ತೋಲೆಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಉಪನೋಂದಣಾಧಿಕಾರಿ ಕಛೇರಿಗಳಲ್ಲಿ ಆಸ್ತಿ ದಾಖಲೆಗಳ ನೋಂದಣಿಗಾಗಿ ಸಾರ್ವಜನಿಕರು ತೆರಳಿದಾಗ ಸಾಮಾನ್ಯವಾಗಿ ಪ್ರತಿ ದಿನ ಸರ್ವರ್ ಡೌನ್ ಎಂಬ ಉತ್ತರ ನೀಡಿ ಸಾರ್ವಜನಿಕರನ್ನು ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; | ಸರ್ವರ್ ಸಮಸ್ಯೆಯಿಂದ ಕೆಲವೊಮ್ಮೆ ದಸ್ತಾವೇಜು ನೋಂದಣಿಯು ವಿಳಂಬವಾಗುತ್ತಿದ್ದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶವನ್ನು 2008ರಲ್ಲಿ ಭೂಮಿ ತಂತ್ರಾಂಶದೊಂದಿಗೆ, 2014ರಲ್ಲಿ ಇ-ಸ್ವತ್ತು ತಂತ್ರಾಂಶದೊಂದಿಗೆ, 2019ರಲ್ಲಿ ಇ-ಆಸ್ತಿ ತಂತ್ರಾಂಶದೊಂದಿಗೆ, 2020ರಲ್ಲಿ ಬಿಡಿಎ ಹಾಗೂ ಬಿಬಿಎಂಪಿ ತಂತ್ರಾಂಶಗಳೊಂದಿಗೆ ಸಂಯೋಜಿಸಲಾಗಿದ್ದು, ಇದರಿಂದಾಗಿ ಸರ್ವರ್‌ಗೆ ಹೆಚ್ಚುವರಿ ಒತ್ತಡ ಇರುತ್ತದೆ. ಸಂಯೋಜನೆಯಾಗಿರುವ ಇತರೆ ಇಲಾಖೆಯ ತಂತ್ರಾಂಶದಲ್ಲಿ ಯಾವುದೇ ಸಮಸ್ಯೆ ಉಂಟಾದಲ್ಲಿ ಅದು ಕಾವೇರಿ ತಂತ್ರಾಂಶದಲ್ಲಿ ಪ್ರತಿಬಿಂಬಿಸಿ ನೋಂದಣಿಗೆ ತೊಂದರೆಯಾಗುತ್ತದೆ.<br>ಉದಾಹರಣೆಗೆ ದಿನಾಂಕ: 08-03-2021 ರಂದು ಓ.ಟಿ.ಪಿ ಸಮಸ್ಯೆ ಉಂಟಾಗಿದ್ದು, ಇದು ಕಾವೇರಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ತಂತ್ರಾಂಶದ ಸಮಸ್ಯೆ ಆಗಿರುವುದಿಲ್ಲ. ಇದು e-Governance ಇಲಾಖೆಯ ಅಡಿ ಬರುವ Directorate of Electronic Delivery of Citizen Services (EDCS)ರವರ SMS ಸೇವೆಯಲ್ಲಿನ ಸಮಸ್ಯೆಯಾಗಿರುತ್ತದೆ. ಸದರಿ ದಿನದಂದು ಸುಮಾರು 5 ಗಂಟೆಯವರೆಗೆ ಇತರೆ ಇಲಾಖೆಯೊಂದಿಗೆ ಸಂಪರ್ಕಿಸಿ, ಸಮಸ್ಯೆ ಪರಿಹರಿಸಿ, ನೋಂದಣಿ ಪ್ರಾರಂಭಿಸಲಾಗಿರುತ್ತದೆ. |
| ಇ) | ಸರ್ವರ್ ಡೌನ್ ಎಂಬ ಕಾರಣ ನೀಡಿ ದಾಖಲೆಗಳನ್ನು ನೋಂದಣಿ ಮಾಡದೇ ತೊಂದರೆಯನ್ನುಂಟು ಮಾಡುವವರಿಂದಲೇ ಸರ್ಕಾರಕ್ಕೆ ಉಂಟಾದ ಆದಾಯ ನಷ್ಟವನ್ನು ಯಾರಿಂದ ವಸೂಲಿ ಮಾಡಲಾಗುವುದು; ಈ ಕುರಿತು ಸರ್ಕಾರಕ್ಕೆ ಉಂಟಾದ ಆದಾಯ ನಷ್ಟವನ್ನು ಯಾರಿಂದ ವಸೂಲಿ ಮಾಡಲಾಗುವುದು; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಕೆಲವೊಮ್ಮೆ ಸರ್ವರ್‌ಗಳ ಸಮಸ್ಯೆಯಿಂದ ದಸ್ತಾವೇಜುಗಳ ನೋಂದಣಿ ಪ್ರಕ್ರಿಯೆಯು ವಿಳಂಬವಾಗುತ್ತಿದ್ದು, ಇದರಿಂದ ಸರ್ಕಾರಕ್ಕೆ ರಾಜಸ್ವ ನಷ್ಟ ಉಂಟಾಗಿರುವುದಿಲ್ಲ. ಉಪನೋಂದಣಿ ಕಛೇರಿಗಳಲ್ಲಿ ಸರ್ವರ್‌ಗಳ ಸಮಸ್ಯೆ ಇಲ್ಲದಿದ್ದರೂ ಸರ್ವರ್ ಡೌನ್ ಎಂಬ ಕಾರಣ ನೀಡಿ ಸಾರ್ವಜನಿಕರಿಗೆ ದಸ್ತಾವೇಜುಗಳ ನೋಂದಣಿಯಲ್ಲಿ ತೊಂದರೆ ಮಾಡಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ. |
| ಈ) | ಆಸ್ತಿಯ ಮಾರಾಟ ಮತ್ತು ಖರೀದಿಯನ್ನು ಆನ್‌ಲೈನ್ ಮೂಲಕವೇ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? | ಈ ಸಂಬಂಧ ಇಲಾಖೆಯು ಕಾವೇರಿ ಆನ್‌ಲೈನ್ ಸೇವೆಗಳನ್ನು ಜಾರಿಗೆ ತಂದಿದ್ದು, ಇದರಲ್ಲಿ ಸಾರ್ವಜನಿಕರು ಆನ್‌ಲೈನ್‌ನಲ್ಲಿ ದಸ್ತಾವೇಜುಗಳ ನೋಂದಣಿ ಪೂರ್ವದ ಮಾಹಿತಿಯನ್ನು ದಾಖಲಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. |

ಸಂಖ್ಯೆ: ಕಂಇ/127/ಎಂಎನ್‌ಎಸ್‌ಎ/2021

**(ಆರ್.ಅಶೋಕ್)**
**ಕಂದಾಯ ಸಚಿವರು**

(2)

ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

Date 3/4/17

ಸಂಖ್ಯೆ: ಸಿಬ್ಬಂದಿ-1-42/2016-17

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆ.ಜಿ.ರಸ್ತೆ, ಬೆಂಗಳೂರು-09
ದಿನಾಂಕ:20-03-2017.

## ಸುತ್ತೋಲೆ

ವಿಷಯ: ಉಪನೋಂದಣಿ ಕಛೇರಿ ಮತ್ತು ಜಿಲ್ಲಾನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಅಧಿಕಾರಿಗಳ ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಗುರುತಿನ ಚೀಟಿಗಳನ್ನು ಧರಿಸುವ ಮತ್ತು ತಮ್ಮ ಕರ್ತವ್ಯದ ಸ್ಥಳದಲ್ಲಿ ನಿರ್ವಹಿಸುತ್ತಿರುವ ಹುದ್ದೆ ಅಥವಾ ಶಾಖೆಯ ನಾಮಫಲಕಗಳನ್ನು ಪ್ರದರ್ಶಿಸುವ ಬಗ್ಗೆ.

********

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಉಪನೋಂದಣಿ ಕಛೇರಿಗಳಲ್ಲಿ ಮತ್ತು ಜಿಲ್ಲಾನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಅನಧಿಕೃತ ವ್ಯಕ್ತಿಗಳು ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುವುದಾಗಿ ಮಾನ್ಯ ಕಂದಾಯ ಸಚಿವರು ತಿಳಿಸಿರುತ್ತಾರೆ. ಆದ್ದರಿಂದ ಕಛೇರಿಗಳಲ್ಲಿ ಅನಧಿಕೃತ ವ್ಯಕ್ತಿಗಳು ಯಾವುದೇ ಕಾರಣಕ್ಕೆ ಉದ್ದೇಶವಿಲ್ಲದೇ ಇರುವುದನ್ನು ನಿರ್ಬಂಧಿಸಬೇಕಾಗಿದೆ. ಈ ದಿಸೆಯಲ್ಲಿ ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸಿದ್ದಲ್ಲಿ ಸಾರ್ವಜನಿಕರು, ಅಧಿಕೃತ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಗುರುತಿಸಿ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಳ್ಳಲು ಅನುಕೂಲವಾಗುತ್ತದೆ. ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತಮಗೆ ನಿಗಧಿಪಡಿಸಿರುವ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ವಿಭಾಗ ನಾಮಫಲಕಗಳನ್ನು ಕಡ್ಡಾಯವಾಗಿ ಮತ್ತು ಮೇಜುಗಳ ಮೇಲೆ ಪ್ರದರ್ಶಿಸಿರುವುದು ಕಡ್ಡಾಯಗೊಳಿಸಲಾಗಿದೆ.

ಹೆಚ್.ಸಿ.ಎಲ್ ಸಂಸ್ಥೆಯ ಕಂಪ್ಯೂಟರ್ ಆಪ್‌ರೇಟರ್‌ಗಳು ಹಾಗೂ ಹೊರಗುತ್ತಿಗೆ ಸಿಬ್ಬಂದಿಯು ಸಹ ಕಡ್ಡಾಯವಾಗಿ ತಮ್ಮ ಸಂಸ್ಥೆಯು ನೀಡಿರುವ ಗುರುತಿನ ಚೀಟಿಯನ್ನು ಧರಿಸುವುದು ಮತ್ತು ಸದರಿಯವರ ಭಾವಚಿತ್ರ ವಿರುವ ಗುರುತಿನ ಚೀಟಿಯನ್ನು ಸೂಚನಾ ಫಲಕದಲ್ಲಿ ಹಾಕುವುದು ಮತ್ತು ಪ್ರತಿ ಕಛೇರಿಯ ಸೂಚನಾ ಫಲಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಹೆಸರು ಹೆಚ್.ಸಿ.ಎಲ್. ಸಂಸ್ಥೆಯ ನೌಕರರ ಹೆಸರು ಹಾಗೂ ಹೊರಗುತ್ತಿಗೆ ಸಿಬ್ಬಂದಿಯ ಹೆಸರನ್ನು ಪ್ರದರ್ಶಿಸಲು ತಿಳಿಸಿದೆ.

ಮೇಲೆ ತಿಳಿಸಿದ ಸೂಚನೆಗಳನ್ನು ಉಪನೋಂದಣಿ ಕಛೇರಿಗಳಲ್ಲಿ ಮತ್ತು ಜಿಲ್ಲಾನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಿದೆ. ಸುತ್ತೋಲೆಯಲ್ಲಿನ ಸೂಚನೆಗಳನ್ನು ಪಾಲಿಸುತ್ತಿರುವ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲಾನೋಂದಣಾಧಿಕಾರಿಗಳು ಈ ಕಛೇರಿಗೆ ವರದಿ ಮಾಡಲು ನಿರ್ದೇಶಿಸಿದೆ ಹಾಗೂ ಈ ಸುತ್ತೋಲೆಯಲ್ಲಿನ ಸೂಚನೆಗಳನ್ನು ಪಾಲಿಸದೇ ಇರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಮತ್ತು [redacted] ಕಛೇರಿಯ ಕೆಲಸದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದನ್ನು ನಿರ್ಬಂಧಿಸಲು ವಿಫಲರಾದ್ದಲ್ಲಿ ಅಂತಹ ಕಛೇರಿಗಳ ಮುಖ್ಯಸ್ಥರ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದು.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು.

ಇವರಿಗೆ :

ರಾಜ್ಯದ ಎಲ್ಲಾ ಜಿಲ್ಲಾನೋಂದಣಾಧಿಕಾರಿಗಳು ಮತ್ತು ಉಪನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

EST FILES-1